# ಕಮ್ಮಿತ್ತುನಾಡು

ಸಂಪಾದಕರು

ಡಾ. ಮಂಜುನಾಥ ಎಸ್. ಪಾಟೀಲ

ಡಾ. ಆದಿತ್ಯ

ಡಾ. ವಿಜಯಲಕ್ಷ್ಮೀ ಕಾಳೇರ

K. E. BOARD'S FIRST GRADE ARTS & COMMERCE COLLEGE ★
DHARWAD-6
COLLEGE CODE: 1218

PRINCIPAL
K.E. Board's
First Grade Arts & Commerce College,
Shivaji Circle, Saptapur Road, Dharwad-6



**ಕಮ್ಮಿತ್ತುನಾಡು** – ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಸಂಶೋಧನಾ ಲೇಖನಗಳ ಸಂಗ್ರಹ

**KAMMITTUNADU** - *A Collection of Research Articles Related to History and Culture*

Written by
**Dr. Manjunath S. Patil**
**Dr. Aditya**
**Dr. Vijayalakshmi Kaler**

Published by
**CHETHAN BOOKS**
No. 624, 9th 'D' Main Road,
Hampinagar,
Bangalore - 560 104

First Impression : 2019
Pages : x + 172 = 182
Price : ₹ 200/-
Paper : 70 gsm Maplitho
Size : 1/8th Demmy
© Writer
Copies : 1000
Layout : Chethan
Cover Page : Chethan
ISBN : 978-81-939176-4-0

Printed by
AM Prints
Kamakshipalya, Bengaluru
Mob:9900367237

## ಸಲಹಾ ಮಂಡಳಿ

**ಡಾ. ಕೆ.ಪಿ. ಈರಣ್ಣ**
ಪ್ರಾಧ್ಯಾಪಕರು
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

**ಡಾ. ವಾಸುದೇವ ಬಡಿಗೇರ**
ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು
ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಡಾ. ಗಂಗಾಧರ ದೈವಜ್ಞ**
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಡಾ. ಕೆ. ಚೆನ್ನಬಸಪ್ಪ**
ವಿಶ್ರಾಂತ ಪ್ರಾಧ್ಯಾಪಕರು
ಬಿ.ಎಲ್.ಡಿ.ಇ. ಶಿಕ್ಷಣ ಸಂಸ್ಥೆ
ಜಮಖಂಡಿ

**ಡಾ. ಎಸ್. ನಾಗರಾಜಪ್ಪ**
ಸಹಾಯಕ ಅಧೀಕ್ಷಕ ಶಾಸನ ತಜ್ಞರು
ಎ.ಎಸ್.ಐ, ಮೈಸೂರು

**ಶ್ರೀ. ನೆಲ್ಕುದ್ರಿ ಸದಾನಂದಪ್ಪ**
ಸಹಾಯಕ ನಿರ್ದೇಶಕರು
ರಾಜ್ಯ ಪತ್ರಾಗಾರ ಇಲಾಖೆ
ವಿಕಾಸಸೌದ, ಬೆಂಗಳೂರು

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-1

# ಪರಿವಿಡಿ


ಮುನ್ನುಡಿ

ಸಂಪಾದಕರ ಮಾತು

೧. ಭಾರತೀಯ ಸಂಸ್ಕೃತಿಯಲ್ಲಿ ವಿಶ್ವಕರ್ಮರು /
ಡಾ. ಗಂಗಾಧರ ದೈವಜ್ಞ

೨. ಪಂಪಾತೀರ್ಥದ ಹಂಪಾದೇವಿ /
ಡಾ. ವಾಸುದೇವ ಬಡಿಗೇರ

೩. ವಿಜಯಪುರ ಜಿಲ್ಲೆಯ ಶಾಸನಗಳಲ್ಲಿ ಶಿವಶರಣರು /
ಡಾ. ಕೆ.ಪಿ. ಈರಣ್ಣ

೪. ಶೈವಾಗಮಗಳು /
ಡಾ. ಹೇಮಾವತಿ ಶಿ. ಮೆಣಸಗಿ

೫. ಶೈವ ಪ್ರಭೇದಗಳು (ಪಂಥಗಳು) /
ಡಾ. ಮಂಜುಳಾ ಆಚಾರಿ

೬. ಚಿಗಟೇರಿ ಗ್ರಾಮದ ಪಾಚ್ಯಾವಶೇಷಗಳು /
ಡಾ. ಎಸ್. ನಾಗರಾಜಪ್ಪ

೭. ವಿಜಯಪುರ ಜಿಲ್ಲೆಯ ಕಲ್ಯಾಣದ ಚಾಲುಕ್ಯರ ಕಾಲದ ಶೈವಧರ್ಮ /
ಡಾ. ಆದಿತ್ಯ

೮. ವಿಜಯಪುರ ಜಿಲ್ಲೆಯ ಶೈವ ಶಿಲ್ಪಗಳು /
ಡಾ. ಅಶ್ವಿನಿ ಬ. ಕರೀಕಟ್ಟಿ

೯. ವಿಜಯಪುರ ತಾಲೂಕಿನ ಶೈವ ಶಾಸನಗಳು /
ಡಾ. ಮಂಜುನಾಥ ಎಸ್. ಪಾಟೀಲ

೧೦. ಧಾರವಾಡ ತಾಲೂಕಿನ ಶೈವ ಶಾಸನಗಳು /
ಡಾ. ವಿಜಯಲಕ್ಷ್ಮೀ ಕಾಳೇರ

೧೧. ಚಾಮರಾಜನಗರದ ಚಾಮರಾಜೇಶ್ವರ ದೇವಾಲಯ /
ಡಾ. ಉಮೇಶ ಸಿ.ಜಿ.

೧೨. ಸರ್ವಧರ್ಮಗಳ ಕೇಂದ್ರ-ಕೋಳಿವಾಡ /
ಡಾ. ಸುರೇಶ ಕ. ಹಾನಗಲ್ಲ



PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad

### ಪರಾಮರ್ಶನ ಗ್ರಂಥಗಳು

೧. ಸೂರ್ಯನಾಥ್ ಯು. ಕಾಮತ್., ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಮೈಸೂರು ಜಿಲ್ಲೆ, ೧೯೮೮.

೨. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–೩ ಮತ್ತು ೪.

೩. ಅಶ್ವತ್ಥನಾರಾಯಣ ಎನ್., ಅರಳಿದ ಅರಕುತಾರ, ಚಾಮರಾಜನಗರ, ೨೦೦೬.

೪. ರಾಜಾವಳಿ ಕಥೆ, ಮಲೆಯಾರು ದೇವಚಂದ್ರ.

೫. ನಂಜಯ್ಯ ಹೊಂಗನೂರು, ಚಾಮರಾಜನಗರ ತಾಲೂಕಿನ ಸ್ಥಳನಾಮಗಳು -- ಒಂದು ಅಧ್ಯಯನ.

೬. Mysore Archaeological Reports ೧೯೦೬–೧೯೪೨.



K.E. BOARD'S FIRST GRADE ARTS & COMMERCE COLLEGE ★ DHARWAD-8 COLLEGE CODE: 1218


## ಸರ್ವಧರ್ಮಗಳ ಕೇಂದ್ರ–ಕೋಳಿವಾಡ


ಡಾ. ಸುರೇಶ ಕ. ಹಾನಗಲ್ಲ


ಭಾರತೀಯ ಸಾಂಸ್ಕೃತಿಕ ಇತಿಹಾಸವನ್ನು ವಸ್ತುನಿಷ್ಠವಾಗಿ ಪುನರ್‌ರಚಿಸುವಲ್ಲಿ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದಾಗಿದೆ. ಇತಿಹಾಸ ಪೂರ್ವಯುಗದಿಂದ ಎಲ್ಲಾ ಘಟ್ಟಗಳ ಕುರುಹುಗಳನ್ನು ಒಳಗೊಂಡಿರುವ ನಾಡು ಕನ್ನಡನಾಡು. ಕರ್ನಾಟಕದ ಇತಿಹಾಸವನ್ನು ಪುನರ್‌ರಚಿಸುವಲ್ಲಿ ಪುರಾತತ್ವ ಅವಶೇಷಗಳಾದ ದೇವಾಲಯಗಳು ಮತ್ತು ಶಾಸನಗಳು ಬಹಳ ಮಹತ್ವದ ಪಾತ್ರವನ್ನು ವಹಿಸಿವೆ. ಪ್ರಸ್ತುತ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿಗೆ ಒಳಪಡುವ ಕೋಳಿವಾಡ ಗ್ರಾಮ ಹುಬ್ಬಳ್ಳಿಯಿಂದ ಸುಮಾರು ೨೯ ಕಿ.ಮೀ. ದೂರದಲ್ಲಿದೆ. ಈ ಪ್ರದೇಶದಲ್ಲಿ ರಾಷ್ಟ್ರಕೂಟರು, ಗಂಗರು, ಕಲ್ಯಾಣ ಚಾಲುಕ್ಯರು, ವಿಜಯನಗರದರಸರು ಇನ್ನೂ ಅನೇಕ ರಾಜಮನೆತನಗಳು ಆಳಿ–ಅಳಿದು ಹೋಗಿದ್ದಾರೆ. ಪ್ರಸ್ತುತ ಕೋಳಿವಾಡ ಪರಿಸರದ ಶಾಸನಗಳನ್ನು ಮತ್ತು ದೇವಾಲಯಗಳ ಪ್ರಸ್ತಾವನೆಯನ್ನು ಇಲ್ಲಿ ಮಾಡಲಾಗಿದೆ.

### ಕೋಳಿವಾಡ ಪದ ನಿಷ್ಪತ್ತಿ

ಪ್ರಸ್ತುತ ಈ ಪ್ರದೇಶದಲ್ಲಿ ಈಗಾಗಲೇ ಆರು ಶಾಸನಗಳು ವರದಿಯಾಗಿದ್ದು, ಅವುಗಳಲ್ಲಿ ಅತ್ಯಂತ ಪ್ರಾಚೀನ ಶಾಸನ ಕ್ರಿ.ಶ. ೧೦ನೇ ಶತಮಾನಕ್ಕೆ ಸೇರಿದ ರಾಷ್ಟ್ರಕೂಟ ಖೊಟ್ಟಿಗನ ಶಾಸನವಾಗಿದೆ. ಈ ಶಾಸನದಲ್ಲಿ ಸ್ಪಷ್ಟವಾಗಿ "ಕೋಳಿವಾಡ"[1] ಎಂಬ ಪದದ ಉಲ್ಲೇಖವನ್ನು ಕಾಣಬಹುದಾಗಿದೆ, ಒಂದು ಐತಿಹ್ಯದ ಪ್ರಕಾರ ಕುಕ್ಕುಟಪು ಎಂಬ ಹೆಸರನ್ನು ಸ್ಥಳೀಯರು ಉಲ್ಲೇಖಿಸುತ್ತಾರೆ. ಕುಕ್ಕುಟಪು ಎಂದರೆ ಕುಕ್ಕುಟಪುರ ಎಂಬುದು ಸ್ಥಳೀಯ ಐತಿಹ್ಯವಾಗಿದೆ.

### ದಾನಶಾಸನಗಳು

ಈ ಪ್ರದೇಶದಲ್ಲಿ ಎರಡು ದಾನ ಶಾಸನಗಳು ದೊರಕಿವೆ. ಹೆಚ್ಚಾಗಿ ದಾನಶಾಸನಗಳು ಧಾರ್ಮಿಕ ದತ್ತಿಯನ್ನು ಉದ್ದೇಶಿಸುವುದರ ಜೊತೆಗೆ ಖಾಸಗಿ ವ್ಯಕ್ತಿಗಳಿಗೆ ನೀಡಿದ ದಾನಗಳನ್ನು ದಾಖಲು ಮಾಡಿದೆ.[2] ಉದಾ: ದೇವಾಲಯದಲ್ಲಿ ನಡೆಯುವ ಪೂಜೆ–ಪುನಸ್ಕಾರಗಳಿಗೆ, ಪೂಜಾರಿಗಳಿಗೆ, ನರ್ತಿಸುವ ನರ್ತಕಿಯರಿಗೂ, ವಾದ್ಯಗಾರರಿಗೂ, ಮಠದಲ್ಲಿ ನಡೆಯುವ ವಿದ್ಯಾದಾನಕ್ಕೂ, ಅಲ್ಲಿನ ಅಧ್ಯಾಪಕರ ಮತ್ತು ವಿದ್ಯಾರ್ಥಿವೃಂದಕ್ಕೂ, ಲೋಕೋಪಯೋಗಿ ಕಾರ್ಯಗಳಾದ ಕೆರೆ, ಬಾವಿ, ಅರವಟ್ಟಿಗೆ ಜೊತೆಗೆ ವ್ಯಕ್ತಿಯೊಬ್ಬನ ಸೇವೆ ಪರಾಕ್ರಮಗಳನ್ನು ಮನ್ನಿಸಿ ನೀಡಿದ


PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad

ಭೂಮಿರೂಪವಾಗಿರಬಹುದು ಅಥವಾ ನಗದು ರೂಪವಾಗಿರಬಹುದು ಅಥವಾ ಅಗತ್ಯವಸ್ತುಗಳ ಪೂರೈಕೆಯಾಗಿರಬಹುದು.[೩] ಪ್ರಸ್ತುತ ಈ ಪರಿಸರದಲ್ಲಿನ ಚಾವಡಿಯ ಹತ್ತಿರ ಕ್ರಿ.ಶ. ೧೪೫೫ರ ಶಾಸನದ ವಿಷಯ ಅಸ್ಪಷ್ಟವಾಗಿದ್ದು ಮಹಾದೇವರಿಗೆ ದತ್ತಿ ಎಂಬ ವಿಷಯವನ್ನು ಮಾತ್ರ ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ.[೪] ಅದೇ ರೀತಿ ಅಪರೂಪದ ಇನ್ನೊಂದು ಶಾಸನದಲ್ಲಿ ಅಗಸ್ತ್ಯಗೋತ್ರದ ಅಗ್ರಹಾರದ ಯಜಮಾನ ಆನೆಯ ದೇವಪಯ್ಯಗಳ ಮಗ ಸೂರಪಯ್ಯನು ಶ್ರೀ ಮಾಧವ ಜನಾರ್ಧನಸ್ವಾಮಿಯ ಗುಡಿಗೆ ತಿರುಮಲಭೋವನ ಮಗಳು ಸೂರಿಯ ಮಾಣಿಕೆ ಎಂಬ ಹೆಣ್ಣನ್ನು ಕಾಣಬೆಯ ಪಾತ್ರವಾಗಿ ಅವಳ ಜೀವಿತ ವರ್ಷಕ್ಕೆ ಆರು ಘಟ್ಟಿ ವರಹವನ್ನು ವಿವಿಧ ಕ್ಷೇತ್ರಗಳ ಹಸಿಗೆಯಲ್ಲಿ ಮೇಟಿಗೆ ವೊಂಮನದ ಕಟ್ಟಳೆಯಲ್ಲಿ ಬಿಟ್ಟಿರುವ ವಿಷಯ ದಾಖಲಾಗಿದೆ.[೫]

**ಶಾಸನೋಕ್ತ ವೀರಗಲ್ಲುಗಳು**

ಸ್ಮಾರಕಶಿಲೆಗಳಲ್ಲಿ ವೀರಗಲ್ಲುಗಳು ನಾಡಿನ ಪ್ರಾಚೀನ ಮುಖಗಳ ಪರಂಪರೆಯನ್ನು ತಿಳಿಸುವ ಮತ್ತು ವೀರನ ಆದರ್ಶಗಳನ್ನು ಸೂಚಿಸುವ ಸೂಚನಾಫಲಕಗಳಾಗಿವೆ, ಜೊತೆಗೆ ಸಮಾಜದ ಮೌಲ್ಯಗಳನ್ನು ಜೀವಂತವಾಗಿ ಸೆರೆಹಿಡಿಯುವಲ್ಲಿ ಸ್ಮಾರಕಶಿಲೆಗಳು ಪ್ರಮುಖಪಾತ್ರವಹಿಸಿವೆ.[೬]

ಕಲ್ಮೇಶ್ವರ ದೇವಾಲಯದ ಆವರಣದಲ್ಲಿ ಬೆಣಚು ಕಲ್ಲಿನಲ್ಲಿ ಕಂಡರಿಸುವ ಈ ಶಾಸನಶಿಲ್ಪವು ಕ್ರಿ.ಶ. ೧೨ನೇ ಶತಮಾನದಾಗಿದೆ. ತ್ರುಟಿತವಾಗಿರುವ ಈ ವೀರಗಲ್ಲಿನಲ್ಲಿ ಇಬ್ಬರು ವೀರರು ಬಿಲ್ಲು ಬಾಣಗಳನ್ನು ಹಿಡಿದು ಪ್ರಯೋಗಭಂಗಿಯಲ್ಲಿದ್ದು. ಬಲಗಡೆಯ ವೀರ ಎದುರು ಮುಖ ಮಾಡಿಕೊಂಡಿದ್ದರೆ. ಎರಡನೆಯ ವೀರ ಬೆನ್ನನ್ನು ತೋರಿಸಿದ್ದಾನೆ. ಇಬ್ಬರೂ ವಿರುದ್ಧ ದಿಕ್ಕಿನಲ್ಲಿದ್ದು ಇವರಿಬ್ಬರ ಇಕ್ಕೆಲಗಳಲ್ಲಿ ಸ್ತಂಭಗಳಿದ್ದು ಸ್ಪಷ್ಟವಾಗಿ ಅಲ್ಲಿನ ದೃಶ್ಯಗಳು ನಮಗೆ ಗೋಚರಿಸುವುದಿಲ್ಲ.[೭] ಒಟ್ಟಾರೆ ಈ ಪರಿಸರದಲ್ಲಿ ಇನ್ನು ಮೂರು ಶಾಸನಗಳು ದಾಖಲಾಗಿದ್ದು ಒಂದು ಶಾಸನದಲ್ಲಿ ಗಂಗವಂಶ ಸತ್ಯಾಶ್ರಯ ಕೊಂಗಣಿವರ್ಮನನ್ನು ದಾಖಲಿಸುತ್ತದೆ. ಮತ್ತೊಂದು ಶಾಸನವು ಇನ್ನೂರು ಧರ್ಮ ಕೋಳಿವಾಡ ಸೋಮರಾಸಿ ಮಾಡಿಸಿದ ಊರೊಡೆಯ ಧರ್ಮ ಎಂಬ ಉಲ್ಲೇಖವಿದೆ.[೮]

**ದೇವಾಲಯಗಳು**

ದೇವಾಲಯ ಅಂದರೆ ದೇವರ ಆಲಯ ಎಂದರ್ಥ, ದೇವಾಲಯಗಳು ಸಮಾಜದ ಧಾರ್ಮಿಕಶ್ರದ್ಧೆ. ಹಾಗೂ ಭಕ್ತಿಯ ಪ್ರತೀಕವಾಗಿದೆ.[೯] ಪ್ರಸ್ತುತ ಈ ಪರಿಸರದಲ್ಲಿ ಕಲ್ಮೇಶ್ವರ ದೇವಾಲಯವು ಶೈವ ಪರಂಪರೆಯಲ್ಲೇ ಅತ್ಯಂತ ಪ್ರಾಚೀನತಮವಾಗಿದೆ. ಕ್ರಿ.ಶ. ೧೬-೧೭ನೇ ಶತಮಾನದ ಈ ದೇವಾಯವು ಕುರುಬರ ಓಣಿಯಲ್ಲಿದ್ದು, ದೇವಾಲಯವು ಪೂರ್ವಾಭಿಮುಖವಾಗಿದೆ. ಒಳಭಾಗವು ಗರ್ಭಗೃಹ ಮತ್ತು ಸಭಾಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಪಾಣಿವಟ್ಟಲು, ಜಲಹರಿಯನ್ನು ಕಾಣಬಹುದಾಗಿದೆ. ಹಾಗೆಯೇ ಸಭಾಮಂಟಪದಲ್ಲಿ ಜೋಡಿ ನಂದಿಯ ಶಿಲ್ಪಗಳಿದ್ದು, ಕೊರಳಲ್ಲಿ ದಪ್ಪನೆಯ ಗೆಜ್ಜೆಸರವನ್ನು ಕಾಣಬಹುದಾಗಿದೆ. ಉತ್ತಮ ರೀತಿಯ ಮೈಕಟ್ಟನ್ನು ಹೊಂದಿವೆ. ಅಲ್ಲದೇ ದೇವಾಲಯದ ಹೊರಭಾಗದಲ್ಲಿ ಪ್ರಾಚೀನ ಕಾಲದ ಶಿವಲಿಂಗವಿದ್ದು ಅದರ ಬ್ರಹ್ಮಭಾಗದ ಮೇಲೆ ಸಂಸ್ಕೃತದ ಅಕ್ಷರಗಳಿದ್ದು ಅಲ್ಲಲ್ಲಿ ಹಾಳಾಗಿವೆ.[೧೦]

**ವೈಷ್ಣವ ದೇವಾಲಯ**

ಧಾರವಾಡ ಜಿಲ್ಲೆಯಲ್ಲಿ ಐದು ವೈಷ್ಣವ ದೇವಾಲಯಗಳು ಕಂಡು ಬಂದಿದ್ದು ಅವುಗಳಲ್ಲಿ ವೀರನಾರಾಯಣ ದೇವಾಲಯವು ಪ್ರಮುಖವಾಗಿದೆ.[೧೧] ಈ ದೇವಾಲಯವು ಕೋಳಿವಾಡದಲ್ಲಿ ಊರ ಮಧ್ಯದಲ್ಲಿದ್ದು ಕ್ರಿ.ಶ. ೧೩-೧೪ನೇ ಶತಮಾನದ್ದಾಗಿದೆ. ಪೂರ್ವಾಭಿಮುಖವಾಗಿದ್ದು, ಎತ್ತರವಾದ ವೇದಿಕೆಯ ಮೇಲೆ ಇದೆ. ಅಲ್ಲದೇ ಗರ್ಭಗೃಹ ಮತ್ತು ಅಂತರಾಳ ಹೊಂದಿರುವ ಈ ದೇವಾಲಯದಲ್ಲಿ ಸಿಂಹಪೀಠದ ಮೇಲೆ ಗರುಡಪೀಠ ಹೊಂದಿರುವ ನಾರಾಯಣಮೂರ್ತಿ ಇದೆ. ಅಲ್ಲದೇ ಅಂತರಾಳದ ಎಡಬದಿಯ ಕಂಬದಲ್ಲಿ ಶಾಸನವನ್ನು ಕಂಡರಿಸಲಾಗಿದೆ. ಹಾಗೆಯೇ ಎರಡೂ ದ್ವಾರಗಳ ಬಾಗಿಲುವಾಡ ತ್ರಿಶಾಖಾಲಂಕಾರ ಹೊಂದಿದ್ದು ಲಲಾಟದಲ್ಲಿ ಕಮಲವಿದೆ, ಅಲ್ಲದೇ ಈ ದೇವಾಲಯದ ಪ್ರಾಚೀನ ಅವಶೇಷಗಳು ಮಹಾಮಾಯ ದೇವಾಲಯದ ಪ್ರಾಕಾರದಲ್ಲಿ ಕಂಡುಬರುತ್ತವೆ.

**ಶಾಕ್ತ ದೇವಾಲಯ**

ಪ್ರಾಚೀನ ಕಾಲದಿಂದಲೂ ಮಾತೃದೇವತಾ ಆರಾಧನೆ ಪ್ರಚಲಿತವಿದ್ದು, ಇದು ಜನಸಾಮಾನ್ಯರಲ್ಲಿ ಬೇರುಬಿಟ್ಟಿರುವಂತಹ ಪಂಥವಾಗಿದೆ. ಈಕೆ ಜಗತ್ತನ್ನು ಸೃಷ್ಟಿಸಬೇಕೆಂಬ ಮುನ್ನ ಇವಳು ಪ್ರಕೃತಿಯಲ್ಲಿ ತಾನೊಬ್ಬಳೇ ಅವ್ಯಕ್ತ ಸ್ವರೂಪದಲ್ಲಿದ್ದಳು. ತನ್ನ ಶರೀರ ಎಂದರೆ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಸೃಷ್ಟಿಸಿದಳೆಂಬುದು ಈ ಪಂಥದ ಅಭಿಮತ. ಇದರಿಂದ ನೂರಾರು ಮಾತೃದೇವತಾ ಕಲ್ಪನೆಗೆ ದಾರಿಮಾಡಿಕೊಟ್ಟಿತು.[೧೨] ಸಾಂಖ್ಯದ ಪ್ರಕಾರ ಶಕ್ತಿಯು ಪುರುಷ(ಶಿವ) ನೊಡಗೂಡಿ ಸೃಷ್ಟಿಗೆ ಕಾರಣಗಳಾಗಿದ್ದಾಳೆ. ಇದರಿಂದ ಅವಳು ಶಿವನಿಗಿಂತ ಮಿಗಿಲಾದವಳಾಗಿದ್ದು ಅನ್ಯದೇವತೆಗಳ ಮಡದಿಯರಲ್ಲಿ ಶಕ್ತಿಯ ವಿವಿಧ ರೂಪಗಳಾಗಿವೆ.[೧೩]

K.E. BOARD'S FIRST GRADE ARTS & COMMERCE COLLEGE ★ DHARWAD-8 COLLEGE CODE: 1219
PRINCIPAL
K. E. Board's
First Grade Arts & Commerce College
Shivaji Circle, Savadatti Road, Dharwad-8

ಪ್ರಸ್ತುತ ಈ ಪರಿಸರದಲ್ಲಿ ದುರ್ಗೆ ಮತ್ತು ಮಹಾಮಾಯಿ ದೇವಾಲಯಗಳು ಕಂಡು ಬಂದಿವೆ. ಮಹಾಮಾಯಿಯ ದೇವಾಲಯವು ಪೂರ್ವಾಭಿಮುಖವಾಗಿದ್ದು ಅಂತರಾಳ ಮತ್ತು ಅದಕ್ಕೆ ಹೊಂದಿಕೊಂಡಂತೆ ಎತ್ತರವಾದ ಕಟ್ಟೆಗೆಯ ಕಂಬಗಳಿಂದ ಕೂಡಿರುವ ಮಂಟಪವಿದೆ. ಅಲ್ಲದೇ ಈ ಗೋಡೆಗೆ ನಾಗ ಮತ್ತು ಎರಡು ವೀರಗಲ್ಲುಗಳನ್ನು, ಹಾಗೂ ನಾರಾಯಣ ದೇವಾಲಯದಲ್ಲಿರುವ ಕಂಬಗಳನ್ನು ಇಲ್ಲಿ ಕಾಣಬಹುದಾಗಿದೆ. ಜೊತೆಗೆ ದುರ್ಗಮ್ಮ ದೇವಾಲಯದ ಮುಮ್ಮುಖದಲ್ಲಿನ ವೇದಿಕೆಯಲ್ಲಿ ಸಪ್ತಮಾತೃಕೆಯರ ಶಿಲ್ಪಗಳನ್ನು ಕಾಣಬಹುದಾಗಿದ್ದು ಅವು ಅಸ್ಪಷ್ಟವಾಗಿ ಕಾಣುತ್ತವೆ. ಅಲ್ಲದೇ ಇತ್ತೀಚೆಗೆ ನವಗ್ರಹದ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ.

**ಮೂರ್ತಿಶಿಲ್ಪಗಳು**

ಭಾರತದಲ್ಲಿ ದೇವಾಲಯ ನಿರ್ಮಾಣ ಎಂದು ಆರಂಭವಾಯಿತೋ ಅಂದಿನಿಂದ ದೇವರಮೂರ್ತಿಗಳ ಪ್ರತಿಷ್ಠಾಪನೆ ಮತ್ತು ಆರಾಧನೆ ಇದೆ. ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಕ್ಕೆ ಒಂದಕ್ಕೊಂದು ಅವಿನಾಭಾವ ಸಂಬಂಧವಿರುವುದಲ್ಲದೇ ವಾಸ್ತುಶಿಲ್ಪಕ್ಕಿಂತ ಮೂರ್ತಿಶಿಲ್ಪಕ್ಕೆ ಪ್ರಾಚೀನ ಇತಿಹಾಸವಿದೆ ಎಂದು ತಿಳಿದುಬರುತ್ತದೆ. ದೇವಾಲಯ ಎಂದರೆ ದೇವರಿಗಾಗಿ ಅಥವಾ ಮೂರ್ತಿಗಾಗಿ ಕಟ್ಟಲ್ಪಟ್ಟ ಮಂದಿರ ಎಂದರ್ಥ. ಒಟ್ಟಾರೆಯಾಗಿ ಮೂರ್ತಿಶಿಲ್ಪ ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವುದನ್ನು "ಮೂರ್ತಿಶಿಲ್ಪಶಾಸ್ತ್ರ" ಎಂದು ಕರೆಯಲಾಗಿದೆ.[೧೪] ಮೂರ್ತಿಶಿಲ್ಪದಲ್ಲಿ ಚಲ, ಅಚಲ ಎಂಬ ಭೇದಗಳಿದ್ದು. ಮುಖ್ಯವಾಗಿ ಆಯುಧಗಳು, ಆಭರಣ ಮತ್ತು ಭಂಗಿಗಳು ಇಲ್ಲಿ ಮಹತ್ವವನ್ನು ಪಡೆದಿವೆ. ಪ್ರಸ್ತುತ ಈ ಪರಿಸರದ ಮೂರ್ತಿಶಿಲ್ಪಗಳ ಚಿತ್ರಣವನ್ನು ಇಲ್ಲಿ ಕೊಡಲಾಗಿದೆ.

**ಬೌದ್ಧಶಿಲ್ಪ**

ಪ್ರಾಚೀನ ಧರ್ಮಗಳಲ್ಲಿ ಬೌದ್ಧಧರ್ಮವು ಒಂದಾಗಿದೆ. ಈ ಧರ್ಮದಲ್ಲಿ ಹೀನಯಾನ, ಮಹಾಯಾನ ಮತ್ತು ವಜ್ರಯಾನ ಎಂಬ ಮೂರು ಪಂಥಗಳನ್ನು ಕಾಣುತ್ತೇವೆ. ಮಹಾಯಾನ ಬೆಳೆಯುತ್ತಾ ನಂತರದ ಕಾಲಘಟ್ಟದಲ್ಲಿ ಅಧಃಪತನವನ್ನು ಕಾಣಲು ಪ್ರಾರಂಭವಾಯಿತು. ಕಾರಣ ಬೌದ್ಧಭಿಕ್ಷುಗಳ ಸಂಘ ನಿಯಮದಲ್ಲಿ ಶೈಥಿಲ್ಯ ತಲೆದೋರಿತಲ್ಲದೇ ಅವರು ಸುಖೋಪಾಸಕರಾಗಿದ್ದು ಜೊತೆಗೆ ತಾಂತ್ರಿಕ ಪದ್ಧತಿಗಳನ್ನು ಗುಟ್ಟಾಗಿ ರೂಢಿಸಿಕೊಂಡರು. ಇಂತಹ ಸಂದರ್ಭದಲ್ಲಿ ವಜ್ರಯಾನ ಎಂಬ ಶಾಖೆಯು ಬೆಳವಣಿಗೆಯನ್ನು ಕಂಡಿತು.

ವಜ್ರಯಾನದಲ್ಲಿ ಹೆಣ್ಣಿಗೆ ಪ್ರಾತಿನಿಧ್ಯ ನೀಡಿದ್ದರಿಂದ ಧ್ಯಾನಿಬುದ್ಧನಿಗೆ ಶಕ್ತಿ ದೇವತೆಗಳನ್ನು ಕಲ್ಪಿಸಿದರು. ಇವರಲ್ಲಿ ಆರ್ಯತಾರಾ ಎಂಬ ಶಕ್ತಿದೇವತೆ ಪ್ರಮುಖಳು. ಈ ತಾರಾಭಗವತಿಯ ಶಿಲ್ಪ ಕರ್ನಾಟಕದಲ್ಲಿ ಬಹಳ ಅಪರೂಪವಾಗಿದ್ದು ಬಳ್ಳಿಗಾವೆ ಮತ್ತು ಕೋಳಿವಾಡ ಪ್ರದೇಶಗಳಲ್ಲಿದೆ.[೧೫] ಪ್ರಸ್ತುತ ಈ ಶಿಲ್ಪವು ಮೊದಲು ಈ ಊರಿನ ವೀರನಾರಾಯಣ ದೇವಾಲಯದ ಕೆಳಗಡೆ ಸಿಕ್ಕಿದೆ. ಈ ಶಿಲ್ಪವು (ಈಗ ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯದಲ್ಲಿದೆ) ಶಾಸನೋಕ್ತ ಶಿಲ್ಪವಾಗಿದ್ದು, ಕ್ರಿ.ಶ.೧೩ನೇ ಶತಮಾನಕ್ಕೆ ಸೇರಿದೆ. ಪಾದಪೀಠದಲ್ಲಿ ನಾಗರಿಲಿಪಿಯ ಶಾಸನವನ್ನು ಕಾಣುತ್ತೇವೆ. ಕಪ್ಪುಶಿಲೆಯಿಂದ ಕೂಡಿದೆ. ಇವಳು ಸವ್ಯಲಲಿತಾಸನದಲ್ಲಿ ಪದ್ಮಪೀಠದಮೇಲೆ ಕುಳಿತಿದ್ದಾಳೆ. ಶಿರಭಾಗ ಮತ್ತು ಎರಡು ಕೈಗಳು ಭಗ್ನವಾಗಿವೆ. ಅವಳು ತನ್ನ ಬಲಗೈಯಲ್ಲಿ ಕಮಲದ ಹೂವನ್ನು ಹಿಡಿದಿದ್ದಾಳೆ. ಬಲಗಡೆಯ ಪ್ರಭಾವಳಿಯ ಅರ್ಧಭಾಗಮಾತ್ರ ಕಂಡು ಬರುವುದಲ್ಲದೇ ಅದರ ಮೇಲೆ ಚಿತ್ರಗಳಿವೆ. ಕೊರಳಲ್ಲಿ ಹಾರ, ಸರ, ಯಜ್ಞೋಪವೀತ, ಕಾಲ್ಗಡಗವನ್ನು ಧರಿಸಿದ್ದು, ಪಂಚೆಯನ್ನು ಧರಿಸಿರುವಳು. ಅಲ್ಲದೇ ಅವಳ ಕಾಲಿನ ಎರಡೂ ಕಡೆಗಳಲ್ಲಿ ಯಕ್ಷ-ಯಕ್ಷಿಣಿಯರ ಶಿಲ್ಪಗಳು ಕಂಡುಬರುತ್ತವೆ.[೧೬] ಹಾಗೂ ಅದೇ ಪರಿಸರದ ಬಸ್ ನಿಲ್ದಾಣದ ಬಳಿ ಒಂದು ಬೌದ್ಧ ಆಯಕಸ್ತಂಭವಿದ್ದು ಈ ಸ್ಥಂಭದ ಮುಖದಲ್ಲಿ ಆನೆ, ಕುದುರೆ, ಬುದ್ಧ, ಮುಂತಾದ ಶಿಲ್ಪಗಳಿವೆ. ಇವು ಮಧ್ಯಯುಗೀನ ಕಾಲದಲ್ಲಿ ಬೌದ್ಧವಿಹಾರವು ಇದ್ದಿರುವ ಸಾಧ್ಯತೆಯನ್ನು ಸೂಚಿಸಬಹುದಾಗಿದೆ. ಇನ್ನೊಂದು ಶಿಲ್ಪ ಗಜಗಳೆರಡು ಜಲಾಭಿಷೇಕ ಮಾಡುತ್ತಿರುವ ಮತ್ತು ಮೇಲ್ಭಾಗದಲ್ಲಿ ಕಮಲವನ್ನು ಹಿಡಿದುಕೊಂಡು ಕುಳಿತಿರುವಂತಹ ಯಕ್ಷನದ್ದಾಗಿದೆ.

**ಶೈವಶಿಲ್ಪಗಳು**

ಶೈವ ಪಂಥದಲ್ಲಿ ಶಿವನಿಗೆ ಪ್ರಮುಖ ಸ್ಥಾನ, ತ್ರಿಮೂರ್ತಿಗಳಲ್ಲಿ ಮೂರನೆಯವನಾದ ಶಿವ ಪ್ರಳಯ ಕರ್ತೃನಾಗಿದ್ದಾನೆ. ಇದರ ಪ್ರಾಚೀನತೆಯನ್ನು ಸಿಂಧೂ ನಾಗರೀಕತೆಯ ಹರಪ್ಪಾ, ಮಹೆಂಜೋದಾರ್ ಮತ್ತು ಕಾಲಿಬಂಗನ್ ನೆಲೆಗಳಲ್ಲಿ ಮತ್ತು ವೈದಿಕ ಸಾಹಿತ್ಯದಲ್ಲಿ ಗುರುತಿಸಬಹುದಾಗಿದೆ. ಲಿಂಗಗಳಲ್ಲಿ ಸ್ಥಿರಲಿಂಗ, ಚರ, ಚರಾಚರ ಮತ್ತು ಬಾಣಲಿಂಗಗಳಿವೆ. ಅಲ್ಲದೇ ಪ್ರಾಚೀನ ಕಾಲದಲ್ಲಿ ಲಿಂಗಗಳು ಪೀಠ ರಹಿತವಾಗಿದ್ದು ಕಾಲಾನಂತರದಲ್ಲಿ ಪೀಠ, ಪಾಣಿವಟ್ಟಲು, ಜಲಹರಿ ಮತ್ತು ಬ್ರಹ್ಮಸೂತ್ರಗಳು ಸೇರ್ಪಡೆಗೊಂಡವು. ಮೂರ್ತರೂಪಕ್ಕಿಂತ ಅಮೂರ್ತವಾದ ಲಿಂಗರೂಪದಲ್ಲೇ ಶಿವನನ್ನು ಸಂಕೇತವಾಗಿ ತೋರಿಸಿರುತ್ತಾರೆ. ಪ್ರಸ್ತುತ ಮೈಲಾರ ಲಿಂಗೇಶ್ವರ ದೇವಾಲಯದ ಮುಂಭಾಗದಲ್ಲಿ ಶಿವಲಿಂಗದ ಬ್ರಹ್ಮಭಾಗ ಮತ್ತು ರುದ್ರಭಾಗಗಳು ಮಾತ್ರ ಕಂಡುಬರುವುದು ವಿಶೇಷವಾಗಿದೆ.

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad

K.E. BOARD'S FIRST GRADE ARTS & COMMERCE COLLEGE ★ DHARWAD-8 COLLEGE CODE: 1218

**ನಂದಿಶಿಲ್ಪಗಳು**

ಶಿವನಿಗೆ ಪ್ರಾತಿನಿಧ್ಯ ಕಲ್ಪಿಸಿದಂತೆ ಅಷ್ಟೇ ಮಹತ್ವವನ್ನು ಶಿವನ ವಾಹನವಾದ ನಂದಿಗೂ ನೀಡಲಾಗಿದೆ. ಪ್ರಸ್ತುತ ಕಲ್ಮೇಶ್ವರ ದೇವಾಲಯದ ಸಭಾಮಂಪದಲ್ಲಿ ಅಪರೂಪದ ಎರಡು ಜೋಡಿ ನಂದಿಯ ಶಿಲ್ಪಗಳಿವೆ. ಅಲ್ಲದೇ ಎರಡೂ ನಂದಿಯ ಕೊರಳಲ್ಲಿ ದಪ್ಪನೆಯ ಗೆಜ್ಜೆಯಸರವನ್ನು ಕಾಣಬಹುದಾಗಿದ್ದು ನಂದಿ ಶಿವನಿಗೆ ಅಭಿಮುಖವಾಗಿವೆ.

**ವೀರಭದ್ರ**

ವೀರಭದ್ರನು ಶಿವನ ಒಂದು ರೂಪವಾಗಿದ್ದು, ಇವನ ಬಗ್ಗೆ ವೈದಿಕ ಸಾಹಿತ್ಯದಲ್ಲಿ, ಲಿಂಗ, ಸ್ಕಂದ, ವಾಯು, ಬ್ರಹ್ಮಾಂಡ, ವಿಷ್ಣು ಪುರಾಣ ಮತ್ತು ಕೂರ್ಮಪುರಾಣದಲ್ಲಿ ಉಲ್ಲೇಖಗಳಿವೆ. ದಕ್ಷನು ಯಜ್ಞವನ್ನು ಮಾಡುತ್ತಿರಲು ಆ ಯಜ್ಞಕ್ಕೆ ಎಲ್ಲರನ್ನೂ ಆಹ್ವಾನಿಸಿದನಲ್ಲದೇ ಶಿವ ಮತ್ತು ಪಾರ್ವತಿಯನ್ನು ಕರೆದಿರಲಿಲ್ಲ, ಆದರೂ ಪಾರ್ವತಿಯು ಆ ಯಜ್ಞಮಂಟಪಕ್ಕೆ ಹೋದಾಗ ದಕ್ಷನು ಅವಳನ್ನು ಅವಮಾನಿಸಿದನು, ಆಗ ಪಾರ್ವತಿಯು ಅಲ್ಲಿಯೇ ಇದ್ದಂತಹ ಯಜ್ಞಕುಂಡಕ್ಕೆ ಹಾರಿ ಪ್ರಾಣವನ್ನು ಬಿಡುತ್ತಾಳೆ. ಈ ಸುದ್ದಿಯನ್ನು ತಿಳಿದ ಶಿವನು ಕೋಪಗೊಂಡು ತನ್ನ ಜಡೆಯನ್ನು ನೆಲಕಪ್ಪಳಿಸಿದಾಗ ವೀರಭದ್ರನು ಹುಟ್ಟಿ ಅವನನ್ನು ಸಂಹರಿಸಿದನು ಎಂದಿದೆ.[೧೭] ಪ್ರಸ್ತುತ ಈ ಪ್ರದೇಶದಲ್ಲಿ ಒಂದು ವೀರಭದ್ರನ ದೇವಾಲಯವಿದ್ದು ಅವನು ಸ್ಥಾನಿಕ ಭಂಗಿಯಲ್ಲಿ ನಿಂತಿದ್ದಾನೆ. ಕೈಯಲ್ಲಿ ಕತ್ತಿ, ಬಾಣ, ಗುರಾಣಿ, ಖಡ್ಗವನ್ನು ಹಿಡಿದಿದ್ದಾನೆ. ಕೊರಳಲ್ಲಿ ರುಂಡಮಾಲೆ, ಸೊಂಟದಲ್ಲಿ ಕಟಿಬಂಧ, ಕಿರೀಟ, ಪಾದದಲ್ಲಿ ಪಾದರಾಕ್ಷಿ ಮತ್ತು ಎಡಬದಿಯಲ್ಲಿ ಭದ್ರಕಾಳಿ, ಬಲಬದಿಯಲ್ಲಿ ಟಗರಿನ ಮುಖವುಳ್ಳ ದಕ್ಷನನ್ನು ಗುರುತಿಸಬಹುದಾಗಿದೆ.

**ಸೂರ್ಯ**

ಪ್ರಪಂಚದ ಪ್ರಾಚೀನ ವಿವಿಧ ಧಾರ್ಮಿಕ ಪಂಥಗಳಲ್ಲಿ ಸೂರ್ಯಪಂಥವೂ ಒಂದಾಗಿದೆ. ಇವನ ಬಗ್ಗೆ ಋಗ್ವೇದದ ಒಂದನೇ ಮಂಡಲದಲ್ಲಿ ಅಗ್ನಿ ಮತ್ತು ಸೂರ್ಯನಿಗೆ ಬಹುಸಾಮಿಪ್ಯವನ್ನು ಕಲ್ಪಿಸಲಾಗಿದೆ. ಐದನೆಯ ಮಂಡಲದಲ್ಲಿ ಸೂರ್ಯನ ರಥ, ಪೀಠದಲ್ಲಿ ಏಳು ಕುದುರೆಗಳು ಹಾಗೂ ಹತ್ತನೆ ಮಂಡಲದಲ್ಲಿ ಅವನ ವಿವಾಹದ ಕುರಿತು ಉಲ್ಲೇಖಿಸಲಾಗಿದೆ.[೧೮] ಪ್ರಸ್ತುತ ಊರ ಮಧ್ಯದಲ್ಲಿರುವ ಆಲದ ಮರದ ಕೆಳಭಾಗದಲ್ಲಿ ಸೂರ್ಯನ ವಾಹನವಾದ ಏಳು ಕುದುರೆಗಳು ಇವೆ. ಆದರೆ ಸೂರ್ಯನ ಶಿಲ್ಪವು ಅಲ್ಲಿ ಕಾಣಬರುವುದಿಲ್ಲ ಆದರೆ ಈಗ ಮೇಲ್ಭಾಗದಲ್ಲಿ ಶಿವನ ರುದ್ರಭಾಗವನ್ನು ಇಟ್ಟು ಪೂಜಿಸುತ್ತಿದ್ದಾರೆ.

**ವೈಷ್ಣವ ಶಿಲ್ಪ**

ತ್ರಿಮೂರ್ತಿಗಳಲ್ಲಿ ವಿಷ್ಣುವು ಒಬ್ಬನಾಗಿದ್ದು ಶತಪಥ ಬ್ರಾಹ್ಮಣದಲ್ಲಿ ಮತ್ತು ರೂಪಮಂಡನ ಕೃತಿಯಲ್ಲಿ ಇವನ ಹೆಸರು ಮತ್ತು ಆಯುಧಗಳ ಬಗ್ಗೆ ವಿವರಗಳನ್ನು ಪ್ರಸ್ತಾಪಿಸಲಾಗಿದೆ. ಚತುರ್ಭುಜಧಾರಿಯಾದ ಇವನು ಶಂಖ, ಚಕ್ರ, ಪದ್ಮ ಮತ್ತು ಗದೆಯನ್ನು ಹಿಡಿದುಕೊಂಡಿದ್ದು, ಸಮಭಂಗಿಯಲ್ಲಿ ಅಥವಾ ಅಸೀನ ಭಂಗಿಯಲ್ಲಿ ಇದ್ದಾನೆ. ಇಕ್ಕೆಲಗಳಲ್ಲಿ ಶ್ರೀದೇವಿ ಮತ್ತು ಭೂದೇವಿಯನ್ನು ಹಾಗೂ ವಾಹನವಾದ ಗರುಡನನ್ನು ಚಿತ್ರಿಸಲಾಗಿದೆ. ಪ್ರಸ್ತುತ ದತ್ತಾತ್ರೇಯ ದೇವಾಲಯದಲ್ಲಿನ ಶಿಲ್ಪವು ಅಪರೂಪವಾಗಿದ್ದು ದತ್ತಾತ್ರೇಯನಿಗೆ ಮೂರು ತಲೆಗಳು, ಆರು ಕೈಗಳನ್ನು ಹೊಂದಿದ್ದಾನೆ. ಕೈಗಳಲ್ಲಿ ತ್ರಿಶೂಲ, ಗದಾ, ಅಕ್ಷಮಾಲ, ಡಮರು ಮತ್ತು ಚಕ್ರ ಹಿಡಿದಿದ್ದಾನೆ. ತ್ರಿಮೂರ್ತಿಗಳ ರೂಪದಲ್ಲಿದ್ದಾನೆ. ಈ ಶಿಲ್ಪದ ಕಾಲಿನ ಬಳಿ ಹಂಸ, ನಂದಿ, ಗರುಡ ಕಂಡು ಬರುತ್ತವೆ. ಹಾಗೆಯೇ ಹನುಮಂತನ ಶಿಲ್ಪವೊಂದು ಈ ಪರಿಸರದಲ್ಲಿ ಇದೆ. ಆದರೆ ಅದು ಈಗ ಜೀರ್ಣೋದ್ಧಾರವಾಗುತ್ತಿದೆ.[೧೯]

**ಶಾಕ್ತಶಿಲ್ಪಗಳು**

ಕನ್ನಡ ನಾಡಿನಲ್ಲಿ ಶಕ್ತಿಯ ವಿವಿಧ ರೂಪಗಳು ಕ್ರಿ.ಶ. ೭ನೇ ಶತಮಾನದಲ್ಲಿ ಕಾಣಿಸಿಕೊಂಡದ್ದನ್ನು ನಾವು ಕಾಣುತ್ತೇವೆ. ಹಾಗೆಯೇ ಇವುಗಳ ಉಲ್ಲೇಖಗಳನ್ನು ಋಗ್ವೇದದಲ್ಲಿ ಅದಿತಿ, ಸರಸ್ವತಿ, ಪೃಥ್ವಿ, ರಾತ್ರಿ, ಉಷಸ್ ಅಲ್ಲದೇ ಮಾರ್ಕಂಡೇಯ ಪುರಾಣದಲ್ಲಿ ೨೦೦ ಶ್ಲೋಕಗಳನ್ನು ಮತ್ತು "ಶ್ರೀ ವಿದ್ಯಾವರ್ಣವ" ತಂತ್ರದಲ್ಲಿ ೮೫ ದೇವತಾ ಶಿಲ್ಪಗಳ ವಿವಿಧ ರೀತಿಯ ಪ್ರತಿಮಾ ಲಕ್ಷಣಗಳನ್ನು ಗುರುತಿಸಲಾಗಿದೆ. ಪ್ರಸ್ತುತ ಈ ಪರಿಸರದಲ್ಲಿ ಉಮಾಮಹೇಶ್ವರಿ, ಗಜಲಕ್ಷ್ಮಿ, ಸಪ್ತಮಾತೃಕೆ ಹಾಗೂ ಮಹಿಷಾಸುರಮರ್ಧಿನಿಯ ಶಿಲ್ಪಗಳನ್ನು ಇಲ್ಲಿ ಚರ್ಚಿಸಲಾಗಿದೆ.

**ಉಮಾಮಹೇಶ್ವರಿ**

ಶಿವಪಾರ್ವತಿಯ ಶಿಲ್ಪವನ್ನು ಮೈಲಾರಲಿಂಗವೆಂದೂ ಕರೆಯುವಂತಿದೆ. ಪ್ರಸ್ತುತ ಈ ಪರಿಸರದಲ್ಲಿದ್ದು ಎರಡು ಶಿಲ್ಪಗಳು ಪದ್ಮಾಸನದಲ್ಲಿ ಕುಳಿತಿದೆ. ಕೈಯಲ್ಲಿ ಶಿವನು ಖಡ್ಗ, ತ್ರಿಶೂಲ, ಡಮರುಗವನ್ನು ಹಿಡಿದುಕೊಂಡಿದ್ದು ಹಾಗೂ ತಲೆಯಮೇಲೆ ಕಿರೀಟವಿದೆ. ಕೊರಳಲ್ಲಿ ಯಜ್ಞೋಪವೀತ, ಕಟಿವಸ್ತ್ರ, ಕೇಯೂರ, ಕಂಕಣ, ಪಾದಸರ ಇನ್ನೂ ಮುಂತಾದ ಆಭರಣಗಳನ್ನು ಹೊಂದಿದ್ದು, ಹಿಂಭಾಗದಲ್ಲಿ ಸಿಂಹತೋರಣವಿದೆ. ಇದೇ ಲಕ್ಷಣವನ್ನು ಪಾರ್ವತಿ ಕೂಡಾ ಹೊಂದಿದ್ದು ಆಭರಣವನ್ನು ಧರಿಸಿದೆ. ಆದರೆ ಗಾತ್ರದ ದೃಷ್ಟಿಯಿಂದ ಪಾರ್ವತಿಯ ಶಿಲ್ಪವು ಚಿಕ್ಕಗಾತ್ರವನ್ನು ಹೊಂದಿದೆ. ಅಲ್ಲದೇ ಈ ಮೂರ್ತಿಯ ಹಿಂಭಾಗದಲ್ಲಿ ಶಾಸನವಿದೆ. ಇದು ಅಪ್ರಕಟಿತ.[೨೦]

PRINCIPAL
K. E. Board's
First Grade Arts & Commerce College
Shivaji Circle, Savadatti Road

**ಗಜಲಕ್ಷ್ಮಿ**

ಗಜಲಕ್ಷ್ಮಿಯನ್ನು "ಬಾದುಬ್ಬೆ" ಎಂದು ಕರೆಯುವ ವಾಡಿಕೆಯಿದೆ. ವೈದಿಕ ಸಾಹಿತ್ಯದಲ್ಲಿ, ವಿಷ್ಣುಧರ್ಮೋತ್ತರ ಪುರಾಣದಲ್ಲಿ, ಮತ್ಸ್ಯಪುರಾಣ ಮತ್ತು ಋಗ್ವೇದದಲ್ಲಿ ಗಜಲಕ್ಷ್ಮಿಯ ಬಗ್ಗೆ ಉಲ್ಲೇಖವಿರುವುದನ್ನು ಕಾಣುತ್ತೇವೆ. ಸಾಮಾನ್ಯವಾಗಿ ಈ ಶಿಲ್ಪಗಳು ದೇವಾಲಯದ ದ್ವಾರಬಂಧದ ಲಲಾಟ ಬಿಂಬದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಆದರೆ ಅಪರೂಪದ ಈ ಶಿಲ್ಪಗಳು ಈ ಪರಿಸರದ ಬಸ್‌ನಿಲ್ದಾಣದ ಬಳಿ ಇವೆ. ಅದು ಕ್ರಿ.ಶ.೧೬ನೇ ಶತಮಾನಕ್ಕೆ ಸೇರಿದ್ದಾಗಿದೆ. ಗಜಲಕ್ಷ್ಮಿ ಶಿಲ್ಪವು ಪದ್ಮಾಸನದಲ್ಲಿ ಕುಳಿತಿದ್ದು ಎರಡೂ ಕೈಗಳಲ್ಲಿ ಮೊಗ್ಗನ್ನು ಹಿಡಿದುಕೊಂಡಿದ್ದಾಳೆ. ಇಕ್ಕೆಲಗಳಲ್ಲಿ ನಾಲ್ಕು ಆನೆಗಳು ಕುಂಭಾಭಿಷೇಕ ಮಾಡುತ್ತಲಿದ್ದು, ಎಡಭಾಗದಲ್ಲಿ ಇಬ್ಬರು ಯಕ್ಷಿಯರು ಇದ್ದಾರೆ. ಅನೇಕ ಆಭರಣಗಳು ಮತ್ತು ಆಯುಧಗಳು ಕಂಡುಬರುತ್ತಿದ್ದು ಅವು ಅಸ್ಪಷ್ಟವಾಗಿ ಕಾಣುತ್ತಿವೆ.

**ಸಪ್ತಮಾತೃಕೆ**

ಶಾಕ್ತಶಿಲ್ಪಗಳಲ್ಲಿ ಇವು ಕೂಡಾ ಒಂದಾಗಿವೆ. ಇವುಗಳ ಬಗ್ಗೆ ವರಾಹ ಪುರಾಣ ಮತ್ತು ಆಗಮಗಳಲ್ಲಿ ಉಲ್ಲೇಖಿತವಾಗಿದೆ. ಈ ಸಪ್ತಮಾತೃಕೆಯರು ಬ್ರಹ್ಮನಿಂದ ಸೃಷ್ಟಿಸಲ್ಪಟ್ಟವರಾಗಿದ್ದಾರೆ. ಅಲ್ಲದೇ ಇವರನ್ನು ತಾಯಿ ದೇವರೆಂದೂ ಪೂಜಿಸುತ್ತಾರೆ. ಈ ಸಪ್ತಮಾತೃಕೆಯರಲ್ಲಿ ಯೋಗೇಶ್ವರಿ, ಮಹೇಶ್ವರಿ, ವೈಷ್ಣವಿ, ಬ್ರಾಹ್ಮಿಣಿ, ಇಂದ್ರಾಣಿ, ಚಾಮುಂಡಿ, ವರಾಹಿ ಆಗಿದ್ದು ಇವರನ್ನು ಒಂದೇ ಪಟ್ಟಿಕೆಯಲ್ಲಿ ಕಂಡರಿಸಲಾಗಿದೆ. ಈ ಪಟ್ಟಿಕೆಯ ಬಲಬದಿಯಲ್ಲಿ ವೀರಭದ್ರನನ್ನೂ, ಎಡಬದಿಯಲ್ಲಿ ಗಣೇಶನನ್ನು ಚಿತ್ರಿಸಿದ್ದಲ್ಲದೇ ಪೀಠಗಳಲ್ಲಿ ಅವರವರ ವಾಹನಗಳನ್ನು ಕಂಡರಿಸಲಾಗಿದೆ.೨೧ ಪ್ರಸ್ತುತ ಈ ಪರಿಸರದಲ್ಲಿ ಮೈಲಾರಲಿಂಗೇಶ್ವರ ದೇವಾಲಯದ ಮುಂಭಾಗದಲ್ಲಿ ಮತ್ತು ದುರ್ಗಾ ದೇವಾಲಯದ ಎದುರುಗಡೆಯ ವೇದಿಕೆ ಕೆಳಭಾಗದಲ್ಲಿ ಕಂಡು ಬರುತ್ತವೆ. ಇಲ್ಲಿ ಐದು ಜನ ಮಾತೃಕೆಯರು ಕಂಡುಬಂದಿದ್ದು ಅವರ ಗುರುತಿಸುವುದು ಕಷ್ಟ ಕಾರಣ ಅವುಗಳಿಗೆ ಹೆಚ್ಚಿನ ಭಾಗ ಎಣ್ಣೆಯನ್ನು ಹಾಕಿದ್ದು ಅಸ್ಪಷ್ಟವಾಗಿವೆ.

**ಮಹಿಷಾಸುರಮರ್ಧಿನಿ**

ವಿಷ್ಣುಧ'ರ್ಮೋತ್ತರ ಪುರಾಣದಲ್ಲಿ ಉಲ್ಲೇಖವಾಗಿರುವಂತೆ ಮಹಿಷಮರ್ಧಿನಿಯ ಹೆಸರು ಚಂಡಿಕಾ. ಅವಳ ಬಣ್ಣ ಬಂಗಾರದ ಬಣ್ಣವಾಗಿದ್ದು, ನೋಡಲು ಸಿಟ್ಟಿನ ಮುಖಭಾವ ಹೊಂದಿದ್ದಾಳೆ. ಮಹಿಷನ ರೂಪತಾಳಿ ಬಂದು ರಾಕ್ಷಸನನ್ನು ಮರ್ಧನ ಮಾಡಿದ ನಂತರ ಮಹಿಷಾಸುರಮರ್ಧಿನಿ ಎಂದು ಕರೆಸಿಕೊಂಡಿದ್ದಾಳೆ. ಪ್ರಸ್ತುತ ಮಹಾಮಾಯಿ ದೇವಸ್ಥಾನದ ದ್ವಾರದ ಬಲಭಾಗದಲ್ಲಿ ಈ ಶಿಲ್ಪವಿದ್ದು ತ್ರಿಭಂಗಿಯಲ್ಲಿರುವ ಇವಳು ಎಡಗಾಲನ್ನು ಕೋಣನ ತಲೆಯ ಮೇಲೆ, ಬಲಗಾಲನ್ನು ಹಿಂದೆ ಇರುವ ಸಿಂಹದ ಮೇಲಿಟ್ಟಿದ್ದಾಳೆ. ಇವಳು ಧರಿಸಿದ ಆಭರಣಗಳು ಮತ್ತು ಆಯುಧಗಳು ಅಸ್ಪಷ್ಟವಾಗಿ ಕಾಣುತ್ತವೆ.

**ಉಪಸಂಹಾರ**

ಒಟ್ಟಾರೆ ಈ ಪ್ರದೇಶವು ಒಂದು ಸಾಂಸ್ಕೃತಿಕ ನೆಲೆಗಟ್ಟಿನಿಂದ ಕೂಡಿರುವ ಪ್ರದೇಶವಾಗಿದ್ದು, ಕುಮಾರವ್ಯಾಸನ ಜನ್ಮಸ್ಥಳವೂ ಆಗಿದೆ. ದಸರಾ ಉತ್ಸವದಲ್ಲಿ ಊರಿನ ಎಲ್ಲಾ ಪಲ್ಲಕ್ಕಿಗಳು ಒಂದೆಡೆ ಸೇರಿಕೊಂಡು ಆಯುಧಪೂಜೆ ಮತ್ತು ಬನ್ನಿಹಬ್ಬವನ್ನು ಆಚರಿಸುತ್ತವೆ. ಐತಿಹಾಸಿಕವಾಗಿ ನೋಡಿದಾಗ ಇಲ್ಲಿ ಬಹಳ ಅಪರೂಪವಾಗಿರುವ ಬೌದ್ಧಧರ್ಮದ ತಾರಾಭಗವತಿಯ ಶಿಲ್ಪ ಮತ್ತು ನಾಗರಿಲಿಪಿಯ ಶಾಸನ ಜೊತೆಗೆ ಬೌದ್ಧ ಆಯಕಸ್ತಂಭ, ಹಲವಾರು ದೇವಾಲಯಗಳು, ಮೂರ್ತಿಶಿಲ್ಪಗಳು ಮತ್ತು ಶಾಸನಗಳು ಇಲ್ಲಿನ ಸಾಂಸ್ಕೃತಿಕ ಕುರುಹುಗಳಾಗಿವೆ.

**ಅಡಿಟಿಪ್ಪಣಿಗಳು**

೧. ಕೆ.ಐ.ಸಂ. ೯., ಪು. ೨೮೯.

೨. ಎಮ್.ಜಿ. ಮಂಜುನಾಥ, ಜೆ.ಕೆ. ದೇವರಾಜಸ್ವಾಮಿ, ಕನ್ನಡ ಲಿಪಿ ವಿಕಾಸ, ೨೦೦೪, ಪು. ೧.

೩. ಆರ್. ಶೇಷಶಾಸ್ತ್ರಿ, ಕರ್ನಾಟಕದ ವೀರಗಲ್ಲುಗಳು, ೨೦೦೫. ಪು. ೬

೪. ಅ.ಸೌ.ಇ.ಇ., ೧೯೫೨-೫೩, ನಂ. ೮೬.

೫. ಕೆ.ಐ.ಸಂ. ೧. ಪು. ೧೨೩.

೬ ಎಂ.ಎಂ. ಕಲಬುರ್ಗಿ, ಸಮಾಧಿ, ಬಲಿದಾನ ವೀರಮರಣ ಸ್ಮಾರಕಗಳು, ೧೯೮೦, ಪು. ೩೪.

೭ ಅದೇ, ಪು. ೭೧.

೮. ಕೂ.ಸ. ಅಪರ್ಣ, ದೇವಾಲಯಗಳು ವಾಸ್ತು ಪರಿಚಯ, ೧೯೯೯, ಪು. ೧.

೯. ಎಸ್.ಕೆ. ರಾಮಚಂದ್ರರಾವ್, ಗುಡಿ ಜನರ ಜೀವನಾಡಿ, ೧೯೯೪, ಪು. ೧.

೧೦. ಸುರೇಶ.ಕರಿಬಸಪ್ಪ.ಹಾನಗಲ್ಲ"ಹುಬ್ಬಳ್ಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು" ಅಪ್ರಕಟಿತ ಎಂ.ಫಿಲ್. ಪ್ರಬಂಧ ಶಾಸನಶಾಸ್ತ್ರ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦, ಪು. ೫೯.

PRINCIPAL
K. E. Board's
Grade Arts & Commerce College,
Shivaji Circle, Savadatti Road, Dharwad

೧೧. ಸಿ.ಮಹದೇವ, ಕರ್ನಾಟಕ ದೇವಾಲಯ ಕೋಶ, ಧಾರವಾಡ ಜಿಲ್ಲೆ, ೨೦೦೬, ಪು. ೧೮೭.

೧೨. ಕೆ.ಅನಂತರಾಮು, ಕವಿಬ್ರಹ್ಮಶಿವ ಅಧ್ಯಯನ, ೧೯೯೧, ಪು. ೧೯೯.

೧೩. ಪೂರ್ವೋಕ್ತ, ಪು. ೧೯೮.

೧೪. ಸುರೇಶ.ಬಿ. ಪೂರ್ವೋಕ್ತ, ಪು. ೨೩೫.

೧೫. ಎಂ.ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಂ. ೧, ೨೦೦೮, ಪು. ೧೨೮.

೧೬. ಧಾರವಾಡ ಜಿಲ್ಲೆಯ ಬೌದ್ಧಸ್ಥಳ ಕೋಳಿವಾಡ, ಜಯಶ್ರೀ ದೇಶಮಾನ್ಯ, ಗೋಪಾಲ್.ಆರ್ (ಸಂ), ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ೨೦೦೮, ಪು. ೧೭೯.


೧೭. ಎಸ್.ಕೆ. ರಾಮಚಂದ್ರರಾವ್, ಪೂರ್ವೋಕ್ತ, ಪು. ೭೬.

೧೮. ಶ್ರೀಧರ್‌ಮೂರ್ತಿ, ದೇವತೆಗಳು ಮತ್ತು ಹಬ್ಬಗಳು, ೧೯೮೧, ಪು. ೧೦.

೧೯. ಸುರೇಶ ಕರಿಬಸಪ್ಪ ಹಾನಗಲ್ಲ, ಪೂರ್ವೋಕ್ತ, ಪು. ೮೮.

೨೦. ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಸ್ಥಳೀಯರಾದ ಸೋಮಣ್ಣ ಪೆಂಡೇರ, ರುದ್ರಪ್ಪ ಮೇಟಿ, ಮಲ್ಲಪ್ಪ ಹೋಳಿ, ಇನ್ನೂ ಮುಂತಾದವರು. ಇದು ಅಪ್ರಕಟಿತ ಶಾಸನೋಕ್ತ ಶಿಲ್ಪವಾಗಿದೆ.

೨೧. ಎಸ್.ಕೆ. ರಾಮಚಂದ್ರರಾವ್, ಪೂರ್ವೋಕ್ತ, ಪು. ೧೨-೧೨೬.



ದತ್ತಾತ್ರೇಯ ದೇವಾಲಯದ ಮುಂಭಾಗದ ಜಾಲಂಧ್ರ



ವಿಷ್ಣು ಶಿಲ್ಪ, ವೈಷ್ಣವ ದೇವಾಲಯ

PRINCIPAL
K. E. Board's
First Grade Arts & Commerce College,
Shivaji Circle, Savadatti Road, Dharwad-3





PRINCIPAL

# Kammittanadu - A collection of Research articles Related to History and Culture.

**Article by Dr. Suresh Hangalla.**

**Koliwad is the center of all religions.** Here in this article, the origin of the name of Koliwad with a reference to Rastrakoota period of time is discussed. Aid to Temple and Maths. There are two inspections found to deal with the aid given to run the temples and Maths.

**Inscription Regarding Bravery,**

Here in this inscription we find the heroic deeds of those days. The one inscription on stone indicates to persons holding arrows and Bows.

Temples. The Kalmeshwar Temple is the most ancient Temple found here indication the "SHIVA"Tradition.

Vaishnava Temple : There are five vaishnava temple in Dharwad District. The Veeranarayan temple in Koliwad is an important one

Shakta Temple,

This temple is about the mother of the earth, who created everything.

PRINCIPAL
K. E. Board's
First Grade [illegible] College,
Shivaji Circle, [illegible], Dharwad-6